**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ರಾಯಚೂರು**

**ಸಿ.ಸಿ. ಸಂಖ್ಯೆ - 3963/2021**

ರಾಜ್ಯಪರ ಮಾರ್ಕೆಟ್ಯಾರ್ಡ ಪೊ.ಠಾ ಃವಿಃ ಗೌತಮ ಹಾಗೂ ಇನ್ನೊಬ್ಬ

ನಾನು ಶ್ರೀಮತಿ ಮಮತ.ಡಿ., ಬಿ.ಎಸ್ಸಿ, ಎಲ್‌ಎಲ್.ಬಿ., ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಸಿಜೆಎಂ, ರಾಯಚೂರು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತೇನೆ.

**ಆರೋಪಿತರ ಸಂಖ್ಯೆಃ**

1) ಮುದ್ದಪ್ಪ ತಂದೆ ಜಂಗ್ಲಪ್ಪ, 55 ವರ್ಷ, ಚಾಲಕ, ಸಾಃ ಹರಿಜನವಾಡ, ರಾಯಚೂರು.
2) ರಾಜು ತಂದೆ ಮುದ್ದಪ್ಪ, 22 ವರ್ಷ, ಕೂಲಿ, ಸಾಃ ಹರಿಜನವಾಡ, ರಾಯಚೂರು.
3) ಜಯಪ್ಪ ತಂದೆ ಮುದ್ದಪ್ಪ, 19 ವರ್ಷ, ಕೂಲಿ, ಸಾಃ ಹರಿಜನವಾಡ, ರಾಯಚೂರು.

# ದೋಷಾರೋಪಣೆ

ದಿನಾಂಕ 21-03-2021 ರಂದು ಮಧ್ಯಾಹ್ನ 12.00 ಗಂಟೆಗೆ ಆರೋಪಿತರಾದ ನೀವು ಸಮಾನ ಮನಸ್ಸಿನಿಂದ ಚಾಸಾ-1 ರವರ ಮನೆಗೆ ಬಂದು 1 ನೇ ಆರೋಪಿತನಾದ ನೀನು ಕಟ್ಟಿಗೆಯಿಂದ ತಲೆಗೆ ಹೊಡೆದು ಭಾರಿ ಒಳಪೆಟ್ಟು ಮಾಡಿ ಆ ಮೂಲಕ ಭಾ.ದಂ.ಸಂ. ಕಲಂ 326 ಸಹಿತ 34 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಮನಸ್ಸಿನಿಂದ ಚಾಸಾ-1 ರವರನ್ನು 2 ನೇ ಆರೋಪಿತನಾದ ನೀನು ಮುಂದೆ ಹೋಗದಂತೆ ಗಟ್ಟಿಯಾಗಿ ಹಿಡಿದುಕೊಂಡು ತಡೆದು ನಿಲ್ಲಿಸಿ ಅಕ್ರಮ ತಡೆ ಉಂಟು ಮಾಡಿ ಆ ಮೂಲಕ ಭಾ.ದಂ.ಸಂ. ಕಲಂ 341 ಸಹಿತ 34 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಮನಸ್ಸಿನಿಂದ ಚಾಸಾ-1 ರವರಿಗೆ 2 ನೇ ಆರೋಪಿತನಾದ ನೀನು ಕೈಗಳಿಂದ ಅವರ ಕಪಾಳಕ್ಕೆ

ಹೊಡೆದು, 3 ನೇ ಆರೋಪಿತನಾದ ನೀನು ಕೈಗಳಿಂದ ಬೆನ್ನಿಗೆ ಹೊಡೆದು ಆ ಮೂಲಕ ಭಾ.ದಂ.ಸಂ. ಕಲಂ 323 ಸಹಿತ 34 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಮನಸ್ಸಿನಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾ.ದಂ.ಸಂ. ಕಲಂ 504 ಸಹಿತ 34 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಮನಸ್ಸಿನಿಂದ ಚಾಸಾ-1 ರವರಿಗೆ ಈ ದಿವಸ ಉಳಿದುಕೊಂಡಿ ಇನ್ನೊಮ್ಮೆ ಸಿಕ್ಕರೇ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಮುಗಿಸಿ ಬಿಡುತ್ತೇವೆ ಅಂತ ಜೀವದ ಬೆದರಿಕೆ ಹಾಕಿ ಆ ಮೂಲಕ ಭಾ.ದಂ.ಸಂ. ಕಲಂ 506 ಸಹಿತ 34 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಆದುದರಿಂದ ಸದರಿ ದೋಷರೋಪಣೆಯ ಸಂಬಂಧ ಈ ನ್ಯಾಯಾಲಯದಿಂದ ನಿಮ್ಮ ಮೇಲೆ ವಿಚಾರಣೆಯಾಗಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ದಿನಾಂಕಃ 07-06-2023**

ಪ್ರಧಾನ ಹಿರಿಯ ಸಿವಿಲ್ ಮತ್ತು ಸಿಜೆಎಂ
ನ್ಯಾಯಾಧೀಶರು, ರಾಯಚೂರು.